**ವಿಲಾತಿ** [ಪಾರ, ಹಿಂ, ಮರಾ – ವಿಲಾಯತ್] [ನಾ] ವಿದೇಶ, ಇಂಗ್ಲೆಂಡ್ ಮೊದಲಾದ ಅನ್ಯದೇಶ

**ವಿವೇಕ** [ಸಂ] [ನಾ]ಯುಕ್ತಾಯುಕ್ತ ವಿಚಾರ ವಿವೇಚನೆ, ವಿಮರ್ಶೆ. ಜ್ಞಾನ.

**ವ್ಯವಹಿತ** [ಗು] ಮುಚ್ಚಲ್ಪಟ್ಟ, ಮರೆಮಡಿದ.

## ಶ

**ಶಾಸನವ ನಡು** [ಸಂ] [ಕ್ರಿ] ಅಪ್ಪಣೆಮಾಡು.

**ಶಿತಿಕಂಠ**[ನಾ] ಕಪ್ಪಾದ ಕೊರಳುಳ್ಳವನು, ಶಿವ ನವಿಲು.

**ಶೌರಿ**[ನಾ] ಶೂರಸೇನನ ವಂಶದವನು ಕೃಷ್ಣ, ನವಗ್ರಹಗಳಲ್ಲಿ ಒಂದು, ಶನಿ.

**ಶ್ರವಣ**[ನಾ] ಕೇಳುವಿಕೆ, ಕಿವಿ, ಜೈನ ಸಂನ್ಯಾಸಿ.

## ಸ

**ಸಮಯಿ** [ಸಂ–ಸಮಯಿನ್] [ನಾ] ಒಂದು ಮತ ಯಾ ಸಿದ್ಧಾಂತಕ್ಕೆ ಸೇರಿದ ವ್ಯಾಪ್ತಿ; ಒಂದು ನಿರ್ದಿಷ್ಟ ಸಿದ್ಧಾಂತವನ್ನು ಅನುಸರಿಸುವವ.

**ಸಲೆ** [ದೇ[ನಾ] ವಿಸ್ತೀರ್ಣ, ಕ್ಷೇತ್ರಫಲ [ಅ] ಒಂದೇಸವನೆ, ಸರಿಯಾಗಿ, ಸಂಪೂರ್ಣವಾಗಿ, ನಿಜವಾಗಿ.

**ಸಾವಂತ** [ಸಂ] [ನಾ] ಒಬ್ಬ ರಾಜನ ಅಧೀನದಲ್ಲಿದ್ದು ಕಪ್ಪ ಕಾಣಿಕೆಗಳನ್ನು ಒಪ್ಪಿಸುವ ಆಶ್ರಿತ ರಾಜ, ಮಾಂಡಲಿಕ.

**ಸೆಕ್ಕು** [ದೇ] [ಕ್ರಿ] ಒಳಸೇರಿಸು. ನೆಡು, ಜೋಡಿಸು. ಹಿಡಿದೆಳೆ [ನಾ] ಒಳ ಸೇರುವಿಕೆ, ಕುಗ್ಗುವಿಕೆ.

**ಸೊದೆ** [ಸಂ–ಸುಧಾ] [ನಾ] ಅಮೃತ. ಹಾಲು. ಸುಣ್ಣ, ಗಾರೆ, ನುಚ್ಚು ಮುಂತಾದ ಲೇಪನ ವಸ್ತು.

**ಸಂಕರ** [ನಾ] ಶಿವ, ಕಲಬೆರಕೆ, ಕಸ, ತಿಪ್ಪೆ.

**ಸಮನಿಸು** [ಕ್ರಿ] ಘಟಿಸು, ಉಂಟುಮಾಡು, ಪಡೆ.

**ಸೈದ** [ನಾ] ಸರಳ ಮನುಷ್ಯ, ಪ್ರಾಮಾಣಿಕ.

**ಸ್ಥೈರ್ಯ** [ನಾ] ಮನಸ್ಸಿನ ಗಟ್ಟಿತನ, ಮನೋದಾರ್ಢ್ಯ.

## ಹ

**ಹಗೆ** [ಕ್ರಿ] ದ್ವೇಷ, ಶತ್ರು, ಧಾನ್ಯಗಳನ್ನು ತುಂಬಲು ನೆಲದಲ್ಲಿ ಮಾಡಿರುವ ಕುಳಿ, ಹಗೇವು.

**ಹರಣ** [ನಾ] ಜೀವ, ಪ್ರಾಣ, ಕಳ್ಳತನ, ನಾಶಗೊಳಿಸು.

**ಹವಣು** [ನಾ] ಕಟ್ಟಳೆ, ನಿಯಮ ಸಮಾನ, ಕ್ರಮ, ನೀತಿ.

**ಹಸ್ತ ಸಾಮುದ್ರಿಕ** [ಸಂ] [ನಾ] ಅಂಗೈ ರೇಖೆಗಳ ಆಧಾರದ ಮೇಲೆ ವ್ಯಕ್ತಿಯ ಭವಿಷ್ಯವನ್ನು ಹೇಳುವ ಶಾಸ್ತ್ರ.

**ಹಿಂಗು** [ಸಂ] [ನಾ] ಒಂದು ಬಗೆಯ ಸಸ್ಯ ಮತ್ತು ಅದರ ಹಾಲಿನಿಂದ ತಯಾರಾಗುವ [ಅಡುಗೆ] ಮತ್ತು ಔಷಧಿಗಳಿಗೆ ಬಳಕೆಯಾಗುವ ಒಂದು ಪದಾರ್ಥ, ಇಂಗು.

**ಹೊಗೆದೋರು** [ದೇ–ಹೊಗೆಂಯಾಡು] [ಕ್ರಿ] ಹೊಗೆಯನ್ನು ಸೂಸು. ಕೋಪ, ದ್ವೇಷ ಮುಂತಾದುವು ಒಳಗೊಳಗೇ ಹೆಚ್ಚಾಗು.

**ಹೊದರು** [ದೇ] [ನಾ] ಪೊದೆ. ತೊಡಕು, ತೊಂದರೆ ಪೊಟರೆ. ಕುಳ್ಳಿ. ಬಿರುಕು, ಭಿನ್ನಾಭಿಪ್ರಾಯ.

**ಹೊಯ್ದಾಡು** [ದೇ–ಪೊಯ್] [ಕ್ರಿ]ಹೊಡೆ. ಕಡಿ. ಬಡಿದಾಡು.

* * * * *

NOT TO BE REPUBLISHED @ KTBS